## ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಪಟ್ಟ ಸಮಸ್ಯೆಗಳಿದ್ದಲ್ಲಿ ಕರೆ ಮಾಡಿ: **9480985555**

# ಕೆರೆಕೆರೆ ಗ್ರಾಮದ ಗ್ರಾಮಸ್ಥರ ಬದುಕಲ್ಲಿ ಬದಲಾವಣೆ ತಂದ ಜಲ ಜೀವನ್ ಮಿಷನ್




ಕುರುಗೋಡು ತಾಲೂಕು, ಕಲ್ಲುಕಂಭ ಗ್ರಾಮ ಪಂಚಾಯಿತಿಯ ಕೆರೆಕೆರೆ ಗ್ರಾಮದಲ್ಲಿ ಒಟ್ಟು 309 ಜನವಸತಿಯಿದ್ದು 1342 ಜನಸಂಖ್ಯೆಯಿದೆ. ಈ ಮೊದಲು ಕೆರೆಕೆರೆ ಗ್ರಾಮದ ಕೇವಲ 20 ರಿಂದ 30 ಮನೆಗಳಿಗಷ್ಟೇ ನಳ ನೀರು ಸಂಪರ್ಕ ಒದಗಿಸಲಾಗಿತ್ತು. ಇನ್ನುಳಿದ ಕುಟುಂಬಗಳು ಗ್ರಾಮದಲ್ಲಿದ್ದ 2 ಕೊಳವೆ ಬಾವಿಗಳಿಗೆ ಅವಲಂಬಿತರಾಗಿದ್ದರು. ಆದರೆ 2 ಕೊಳವೆ ಬಾವಿಗಳಿಂದ ಅಷ್ಟೊಂದು ಕುಟುಂಬಗಳ ನೀರಿನ ಬೇಡಿಕೆ ಪೂರ್ತಿಯಾಗುತ್ತಿರಲಿಲ್ಲ. ನೀರಿನ ಅಭಾವ ಇಲ್ಲಿನ ಜನರಿಗೆ ಅತಿಯಾಗಿ ಕಾಡುತ್ತಿತ್ತು.



ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ನೀಡಿರುವುದು ಜಲ ಜೀವನ್ ಮಿಷನ್. ಯೋಜನೆಯ ಉದ್ದೇಶದಂತೆ ಗ್ರಾಮದಲ್ಲಿರುವ ಹಾಗೂ ವಲಸೆ ಹೋಗಿರುವ ಎಲ್ಲಾ ಕುಟುಂಬಗಳಿಗೆ ಕಾರ್ಯಾತ್ಮಕ ಗೃಹ ನಳ ಸಂಪರ್ಕ ಕಲ್ಪಿಸಲಾಗಿದೆ. ಇದರಿಂದ ಪ್ರತಿ ಮನೆಗೂ ದಿನಕ್ಕೆ ಅಗತ್ಯವಿರುವಷ್ಟು ನೀರು ಸರಬರಾಜು ಮಾಡಲಾಗುತ್ತಿದೆ.

ಸದರಿ ಗ್ರಾಮದ 199 ಮನೆಗಳಿಗೆ ಕಾರ್ಯಾತ್ಮಕ ನಳ ಸಂಪರ್ಕ ಮತ್ತು 120 ಮನೆಗಳಿಗೆ ನಳ ಸಂಪರ್ಕ ಕಲ್ಪಿಸಲಾಗಿದೆ. ಕಲ್ಲುಕಂಭ ಗ್ರಾಮ ಪಂಚಾಯಿತಿಯಲ್ಲಿ ನಿರ್ಮಿಸಿರುವ ಕೆರೆಯ ಮತ್ತು ಗ್ರಾಮದ ಬೋರ್ ವೆಲ್ ಮೂಲಕ ಕೆರೆಕೆರೆ ಗ್ರಾಮಕ್ಕೆ ನೀರು ಸರಬರಾಜು ಮಾಡಲಾಗುತ್ತದೆ.

## ಯೋಜನೆಯ ಅನುಷ್ಠಾನದಲ್ಲಿ ಎದುರಾದ ಸವಾಲುಗಳು:

ಜೆಜೆಎಂ ಯೋಜನೆ ಅಡಿಯಲ್ಲಿ ಅನುಷ್ಠಾನಗೊಳಿಸುವ ಕಾರ್ಯಾತ್ಮಕ ಗೃಹ ನಳ ಸಂಪರ್ಕ ಹಾಗೂ ಮೀಟರ್ ಅಳವಡಿಕೆ ಕುರಿತು ಕೆರೆಕೆರೆ ಗ್ರಾಮದ ಜನರಲ್ಲಿ ಆತಂಕ, ಗೊಂದಲ ಮನೆ ಮಾಡಿತ್ತು. ಮೀಟರ್ ಅಳವಡಿಕೆಯಿಂದ ನೀರಿನ ತೆರಿಗೆ ಹೆಚ್ಚು ಆಗುತ್ತದೆ, ಸಮುದಾಯ ವಂತಿಕೆ ಬಗೆಗಿದ್ದ ಗೊಂದಲದಿಂದ ಯೋಜನೆಯನ್ನು ಅನುಷ್ಠಾನಗೊಳಿಸುವುದು ತುಸು ಸವಾಲೆನಿಸಿತ್ತು.

ಆದರೆ ಅನುಷ್ಠಾನ ಸಂಸ್ಥೆಗಳ ಮೂಲಕ ವಿವಿಧ ಮಾಹಿತಿ ಶಿಕ್ಷಣ ಮತ್ತು ಸಂವಹನ ಮೂಲಕ ನೀರು ಮತ್ತು ನೈರ್ಮಲ್ಯದ ಕುರಿತು ಮೊದಲಿಗೆ ಜಾಗೃತಿ ಮೂಡಿಸಲಾಯಿತು. ನಂತರ ಗ್ರಾಮದಲ್ಲಿ ವಿಶೇಷ ಸಭೆಗಳನ್ನು ಏರ್ಪಡಿಸುವ ಮೂಲಕ ಮೀಟರ್ ಮತ್ತು ಪ್ರಷರ್ ಕಂಟ್ರೋಲ್ ವಾಲ್ವ್‌ಗಳ ಅಳವಡಿಕೆ ಉದ್ದೇಶದ ಬಗ್ಗೆ ಗ್ರಾಮಸ್ಥರಿಗೆ ತಿಳಿಸಲಾಯಿತು.

ಗ್ರಾಮಸ್ಥರಿಗೆ ಸರಿಯಾದ ಮಾಹಿತಿ ನೀಡುವಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಚುನಾಯಿತ ಸದಸ್ಯರುಗಳು, ಆಶಾ, ಅಂಗನವಾಡಿ ಕಾರ್ಯಕರ್ತೆಯರು ಸ್ವ ಸಹಾಯ ಸಂಘದ ಸದಸ್ಯರು ಮಹತ್ವದ ಪಾತ್ರ ವಹಿಸಿದ್ದಾರೆ.



ಈಗಾಗಲೇ ಗ್ರಾಮದಲ್ಲಿ ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿ ರಚನೆಯಾಗಿದ್ದು, ಸಮಿತಿಯ ಮಹಿಳಾ ಸದಸ್ಯರಿಗೆ ಕ್ಷೇತ್ರ ಪರೀಕ್ಷಾ ಕಿಟ್ ಮೂಲಕ ನೀರಿನ ಪರೀಕ್ಷೆ ಮಾಡುವ ತರಬೇತಿ ನೀಡಲಾಗಿದೆ. ಆಶಾ, ಅಂಗನವಾಡಿ ಕಾರ್ಯಕರ್ತೆಯರು ನೀರಿನ ಪರೀಕ್ಷೆ ಮಾಡಿ ಗ್ರಾಮಸ್ಥರಿಗೆ ನೀರಿನ ಗುಣಮಟ್ಟದ ಬಗ್ಗೆ ಮಾಹಿತಿ ನೀಡುತ್ತಿದ್ದಾರೆ.

## ಕಾರ್ಯಾತ್ಮಕ ಗೃಹ ನಳ ಸಂಪರ್ಕದ ಬಗ್ಗೆ ಗ್ರಾಮಸ್ಥೆಯ ಸಂತಸದ ಮಾತು:

ಜೆಜೆಎಂ ಅನುಷ್ಠಾನದ ನಂತರ ನೀರಿನ ಸಮಸ್ಯೆಗೆ ಪರಿಹಾರ ಸಿಕ್ಕಿರುವ ಬಗ್ಗೆ ಗ್ರಾಮಸ್ಥೆ ಶ್ರೀಮತಿ ರೇಖಾ ಅವರು ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ. " ಈ ಹಿಂದೆ ನೀರು ದೂರದಿಂದ ತರುತ್ತಿದ್ದೆವು. ಬೆಳಿಗ್ಗೆ ಮತ್ತು ಸಂಜೆ ಹೊತ್ತಲ್ಲಿ ನೀರಿಗಾಗಿ ಗಂಟೆಗಟ್ಟಲೇ ಸರತಿ ಸಾಲಿನಲ್ಲಿ ನಿಂತು ನೀರು ತರಬೇಕಾಗಿತ್ತು. ಮನೆಯಲ್ಲಿ ಸರಿಯಾದ ಸಮಯಕ್ಕೆ ಅಡುಗೆ ಮಾಡುವುದಕ್ಕೂ ಸಾಧ್ಯವಾಗುತ್ತಿರಲಿಲ್ಲ, ಮನೆಯವರಿಗೆಲ್ಲಾ ನೀರು ತರುವುದು ದೊಡ್ಡ ಕೆಲಸವಾಗಿತ್ತು. ಆದರೆ ಮನೆ ಮನೆಗೆ ನಳ ಸಂಪರ್ಕವನ್ನು ಕಲ್ಪಿಸಿರುವುದರಿಂದ ಎಲ್ಲರೂ ನೆಮ್ಮದಿಯಿಂದ ಇದ್ದೇವೆ, ಹೊಲ ಗದ್ದೆಗಳಲ್ಲಿ ಕೆಲಸ ಮಾಡುವಾಗಲೂ ನಾವು "ಜಲ ಜೀವನ್ ಮಿಷನ್" ಯೋಜನೆಯನ್ನು ನೆನೆಪಿಸಿ ಧನ್ಯವಾದ ಹೇಳುತ್ತಿರುತ್ತೇವೆ".

**ಜಲಜೀವನ್ ಮಿಷನ್ ಯೋಜನೆಯಿಂದ ಕೆರೆಕೆರೆ ಗ್ರಾಮದ ಜನರ ಬದುಕಲ್ಲಿ ನೆಮ್ಮದಿಯ ಬದಲಾವಣೆಯಾಗಿದೆ.**